# ಸ್ವಾಮಿ ಶಿವಾನಂದರ ನೆನಪುಗಳು



## ಸ್ವಾಮಿ ಅಶೋಕಾನಂದ



**ಸ್ವಾಮಿ ಅಶೋಕಾನಂದರು ಉತ್ತರ ಕ್ಯಾಲಿಫೋರ್ನಿಯಾದ ವೇದಾಂತ ಸೊಸೈಟಿಯ ಪ್ರಾರಂಭದ ದಿನಗಳಲ್ಲಿದ್ದ ದೇವಸ್ಥಾನದಲ್ಲಿ ಜನವರಿ ೬, ೧೯೬೦ರಂದು ಸಂಜೆಯ ಉಪನಿಷತ್ತಿನ ತರಗತಿಯಲ್ಲಿ ನೀಡಿದ ಉಪನ್ಯಾಸ ಇದು. ನಿರೂಪಣೆಗಾಗಿ ಕೆಲವು ಅಂಶಗಳನ್ನು ಬಿಟ್ಟರೆ ಧ್ವನಿಮುದ್ರಿತ ಉಪನ್ಯಾಸದ ವಸ್ತುರೂಪ ಹೆಚ್ಚು ಬದಲಾಗಿಲ್ಲ. ಸ್ವಾಮಿ ಶಿವಾನಂದರ ಮೂರು ಪತ್ರಗಳನ್ನೂ ವಿಷಯಕ್ಕೆ ಪುಷ್ಟಿ ನೀಡಲು ಸೇರಿಸಲಾಗಿದೆ. ಈ ಲೇಖನವನ್ನು ಇಂಗ್ಲಿಷಿನಿಂದ ಅನುವಾದಿಸಿಕೊಟ್ಟಿರುವವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ. ಇ. ವಸಂತಕುಮಾರ್.**

ಈ ದಿವಸ ಸ್ವಾಮಿ ಶಿವಾನಂದರ ಜನ್ಮದಿನ. ಅವರನ್ನು ಕುರಿತು ನಿಮ್ಮೊಡನೆ ಮಾತನಾಡದೆ ಈ ಸಂಜೆಯು ವ್ಯರ್ಥವಾಗಿ ಕಳೆದುಹೋಗಲು ನಾನು ಬಿಡಬಾರದು. ಅವರನ್ನು ನಾನು ಹೇಗೆ ತಿಳಿದಿದ್ದೆನೋ ಹಾಗೇ ನಿಮಗೆ ತಿಳಿಸುವೆನು. ಅವರನ್ನು ನಾನು ಚೆನ್ನಾಗಿ ಬಲ್ಲವನಾಗಿದ್ದೆ— ಬಹಳ ಚೆನ್ನಾಗಿ ಎಂದೇ ಹೇಳಬೇಕು, ಏಕೆಂದರೆ ಅವರ ಬಳಿಗೆ ಕೆಲವು ವೈಯಕ್ತಿಕ ವಿಷಯಗಳ ಬಗ್ಗೆ ನೆರವನ್ನು ಕೋರಲು ಅನೇಕ ಬಾರಿ ಹೋಗಬೇಕಾದ ಸಂದರ್ಭಗಳಿದ್ದವು. ಎಲ್ಲದಕ್ಕಿಂತ ಮಿಗಿಲಾಗಿ ಇದು ಅವರನ್ನು ಹೆಚ್ಚು ನಿಕಟವಾಗಿ ತಿಳಿಯಲು ನನಗೆ ಅವಕಾಶವನ್ನು ನೀಡಿತು.



ನಿಮ್ಮಲ್ಲಿ ಬಹಳಷ್ಟು ಜನರಿಗೆ ಈಗಾಗಲೇ ತಿಳಿದಿರುವಂತೆ ಸ್ವಾಮಿ ಶಿವಾನಂದರು ಶ್ರೀರಾಮಕೃಷ್ಣರ ಪ್ರಮುಖ ಶಿಷ್ಯರಲ್ಲೊಬ್ಬರು ಮತ್ತು ಬಹಳ ಅಸಾಧಾರಣ ವ್ಯಕ್ತಿಯಾಗಿದ್ದರು. ಅವರು ೧೯೨೨ರಲ್ಲಿ, ಸ್ವಾಮಿ ಬ್ರಹ್ಮಾನಂದರು ಕಾಲವಾದ ನಂತರ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದರು. ಮೊದಲನೆಯ ಅಧ್ಯಕ್ಷರು ಸ್ವಾಮಿ ವಿವೇಕಾನಂದರು, ಎರಡನೆಯವರು ಸ್ವಾಮಿ ಬ್ರಹ್ಮಾನಂದರು, ಮೂರನೆಯವರೇ ಸ್ವಾಮಿ ಶಿವಾನಂದರು. (ಸ್ವಾಮಿ ವಿವೇಕಾನಂದರು ಪ್ರಮುಖ ಕಾರ್ಯದರ್ಶಿಗಳಾಗಿದ್ದರು; ಅಧ್ಯಕ್ಷರಾಗಿರಲಿಲ್ಲ. ಸ್ವಾಮಿ ಬ್ರಹ್ಮಾನಂದರೇ ಪ್ರಥಮ ಅಧ್ಯಕ್ಷರು *–ಸಂ.*) ಅಧ್ಯಕ್ಷರಾದಾಗ ಅವರೇನೂ ಯುವಕರಾಗಿರಲಿಲ್ಲ. ಅವರಿಗೆ ಬಹಳ ವಯಸ್ಸಾಗಿತ್ತೆಂದೂ ಹೇಳಲಾರೆ. ಬಹುಶಃ ೬೫ ವರುಷಗಳನ್ನು ದಾಟಿದ್ದರೆಂದು ತೋರುವುದು, ಆದರೆ ಅವರನ್ನು ವೃದ್ಧಾಪ್ಯ ಆವರಿಸಿದಂತೆ ಕಾಣುತ್ತಿತ್ತು. ಅವರಿನ್ನೂ ಕಡಿಮೆ ವಯಸ್ಸಿನವರಾಗಿದ್ದಾಗ ಅವರನ್ನು ಅನೇಕ ಬಾರಿ ನೋಡಿದ್ದೆನು. ಆಗ ಅವರು ಅತ್ಯಂತ ಸ್ಫುರದ್ರೂಪಿಯಾಗಿ ಕಾಣುತ್ತಿದ್ದರೆಂದು ನನ್ನ ನೆನಪು. ಶ್ರೀರಾಮಕೃಷ್ಣರ ಶಿಷ್ಯರಲ್ಲೆಲ್ಲಾ ಅತ್ಯಂತ ಸುಂದರವಾಗಿದ್ದವರು ಅವರೇ ಎಂದು ನನಗೆ ಕೆಲವು ವೇಳೆ ತೋರಿದೆ. ಅವರು ಎತ್ತರವಾಗಿ, ನೆಟ್ಟಗಿನ ಗಂಭೀರ ಆಕೃತಿಯಿಂದ ಪೌರುಷವಂತರಾಗಿ ಕಾಣುತ್ತಿದ್ದರು. ಬಂಗಾರದ ಮೈಬಣ್ಣವೂ ಸೇರಿ ಕಾಂತಿಯುತರಾಗಿದ್ದರು. ಅನೇಕ ವೇಳೆ ಅಂತಹ ಮಹಾನ್ ಚೇತನಗಳ ಮನಸ್ಸು ಅತ್ಯಂತ ಉನ್ನತಾವಸ್ಥೆಯಲ್ಲಿ ಇರುವುದರಿಂದ ಅವರ ರಕ್ತಕ್ಕೆ ಊರ್ಧ್ವಮುಖವಾಗಿ ಪ್ರವಹಿಸುವ ಪ್ರವೃತ್ತಿ ಇರುತ್ತದೆ. ಸ್ವಾಮಿ ಪ್ರೇಮಾನಂದರೂ ಹೇಗೆ ಆನಂದಮಯರಾಗುತ್ತಿದ್ದರು ಮತ್ತು ಅವರ ಮುಖ ಹೇಗೆ ಅಪರಂಜಿಯಂತೆ ಹೊಳೆಯುತ್ತಿತ್ತು ಎಂಬುದನ್ನು ಇತರ ಸಂದರ್ಭಗಳಲ್ಲಿ ನಾನು ನಿಮಗೆ ಹೇಳಿರುವೆನು. ಸ್ವಾಮಿ ಶಿವಾನಂದರ ಮುಖವು ಹಾಗೆ ಕೆಂಪಾಗದಿದ್ದರೂ ನಸುಗೆಂಪಾದ ಕಾಂತಿಯಿತ್ತು. ಅದರಿಂದ ಅವರು ಇನ್ನೂ ಹೆಚ್ಚು ಆಕರ್ಷಣೀಯವಾಗಿ, ಸ್ಫೂರ್ತಿಯುತರಾಗಿ ಕಾಣುತ್ತಿದ್ದರು.

ಪ್ರಾರಂಭದ ದಿನಗಳಲ್ಲಿ ಅವರು ಕರುಣೆಯ ಮೂರ್ತಿವೆತ್ತಂತಿದ್ದರೂ ತೀಕ್ಷ್ಣಸ್ವಭಾವವೂ ಇತ್ತು. ಸ್ವಾಮಿ ಶಿವಾನಂದರು ಬೇಲೂರು ಮಠದ ಪೂರ್ವ ದಿಕ್ಕಿನಿಂದ

ಬಂದರೆ ಕಿರಿಯ ಸಾಧುಗಳೆಲ್ಲ ಅವರ ಎದಿರುನೋಟವನ್ನು ತಪ್ಪಿಸಿಕೊಳ್ಳಲು ಉತ್ತರ ದಿಕ್ಕಿಗೆ ಹೋಗಿಬಿಡುತ್ತಿದ್ದರು. ನೀವು ಸ್ವಚ್ಛವಾಗಿಲ್ಲದಿದ್ದರೆ, ನಿಮ್ಮ ಉಡುಪಿನಲ್ಲಿ ಏನಾದರೂ ದೋಷವಿದ್ದು ಅವರ ದೃಷ್ಟಿಯೇನಾದರೂ ಅದರತ್ತ ಬಿದ್ದರೆ— ಆಗ ಬಾಣಬಿರುಸಿಗೆ ಸಿದ್ಧವಾಗಬೇಕಾಗುತ್ತಿತ್ತು! ಆ ಸಿಡಿಮದ್ದಿನ ಸುರಿಮಳೆಯಿಂದ ತಪ್ಪಿಸಿಕೊಳ್ಳಲು ಸಾಧುಗಳು ಸಾಮಾನ್ಯವಾಗಿ ಅವರಿಂದ ದೂರವಿರಲು ಪ್ರಯತ್ನಿಸುತ್ತಿದ್ದರು. ಶಿವಾನಂದರು ಮಠದ ಅಧ್ಯಕ್ಷರಾಗುವ ಮೊದಲು ಈ ರೀತಿಯಾಗಿ ಕಠಿಣ ಶಿಸ್ತನ್ನು ವಿಧಿಸುತ್ತಿದ್ದರು. ಆಗ ಅವರಿಗೆ ಮಧ್ಯವಯಸ್ಸು.

ಅಧ್ಯಕ್ಷರಾಗುವುದಕ್ಕೆ ಮೊದಲೇ ಅವರು ಮೃದು ಸ್ವಭಾವದವರಾದರು. ೧೯೨೧ರಲ್ಲಿ, ನಾನು ಮದರಾಸು ಆಶ್ರಮದಲ್ಲಿ ವಾಸಿಸುತ್ತಿದ್ದಾಗ, ಸ್ವಾಮಿ ಬ್ರಹ್ಮಾನಂದರು ಮತ್ತು ಇತರ ಸಂನ್ಯಾಸಿಗಳೊಂದಿಗೆ ಅವರು ಅಲ್ಲಿಗೆ ಬಂದಿದ್ದರು. ಆಗಲೇ ಅವರಿಗೆ ವಯಸ್ಸಾಗಿರುವುದನ್ನು ಗಮನಿಸಿದ್ದೆ. ಅವರ ದೇಹ ಸ್ವಲ್ಪ ಮೆತ್ತಗಾಗಿತ್ತು, ಮೈ ಬಗ್ಗಿತ್ತು, ಮತ್ತು ಅವರ ನೋಟದಲ್ಲಿ ಅಷ್ಟೊಂದು ತೀಕ್ಷ್ಣತೆ ಇರಲಿಲ್ಲ; ಅವರು ಬಹಳ ಕರುಣಾಳುಗಳಾಗಿದ್ದರು. ಅವರಿಗೆ ಕೆಲವು ಶಿಷ್ಯರಿದ್ದಾರೆ ಎಂದು ಕೇಳಿದ್ದೆವು. ಅದೇ ಮದ್ದು! ಯಾರಾದರೂ ಸ್ವಾಮಿಗಳು ಕೆಲವು ಶಿಷ್ಯರನ್ನು ಮಾಡಿಕೊಂಡರೆ, ಅವರು ಇನ್ನು ನಿಮ್ಮನ್ನು ತೀಕ್ಷ್ಣವಾಗಿ ನೋಡಲಾರರು; ಮೃದುವಾಗುವರು, ನಯವಾಗುವರು.

ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ಶಿವಾನಂದರು ಮದರಾಸಿನಿಂದ ಬೇಲೂರಿಗೆ ಹಿಂತಿರುಗಿದ ಸ್ವಲ್ಪ ಕಾಲದ ನಂತರ ಸ್ವಾಮಿ ಬ್ರಹ್ಮಾನಂದರು ಕಾಲವಾದರು. ಆಗ ಸ್ವಾಮಿ ಶಿವಾನಂದರು ಸಂಘದ ಅಧ್ಯಕ್ಷರಾದರು. ಇದಾದ ಕೆಲವು ವರುಷಗಳ ನಂತರವೇ ನಾನು ಅವರ ಸಹಾಯವನ್ನು ಕೋರಬೇಕಾದ ಮತ್ತು ಅವರ ಅಪಾರ ಕರುಣೆಯನ್ನು ನೇರವಾಗಿ ಅನುಭವಿಸುವ ಅವಕಾಶ ಉಂಟಾಯಿತು. ಪುಸ್ತಕಗಳಲ್ಲಿ ಇಲ್ಲದ ಅನೇಕ ವೈಯಕ್ತಿಕ ವಿಷಯಗಳಿಗೆ ಸಂಬಂಧಪಟ್ಟ ಸಂಗತಿಗಳನ್ನು ನಾನೀಗ ಹೇಳುತ್ತೇನೆ. ಸಾಕಷ್ಟು ಆಲೋಚನೆ ಮಾಡಿದ ನಂತರ, ಈ ವಿಷಯಗಳಲ್ಲಿ ಕೆಲವನ್ನು ನಿಮಗೆ ಹೇಳಲು ತೀರ್ಮಾನಿಸಿರುವೆನು. ಒಂದು ದೃಷ್ಟಿಯಿಂದ ಹೇಳದಿರುವುದು ಮೇಲು; ಆದರೆ ಮತ್ತೊಂದು ದೃಷ್ಟಿಯಿಂದ ಹೇಳುವುದೇ ಮೇಲೆಂದು ಭಾವಿಸುವೆನು. ಏಕೆಂದರೆ ಹಾಗೆ ಮಾಡದೆ ಸ್ವಾಮಿ ಶಿವಾನಂದರೊಂದಿಗಿನ ನನ್ನ ಸಂಬಂಧ ಮತ್ತು ನಾನು ಅವರಿಗೆ ಋಣಿಯಾಗಿರುವುದರ ಬಗ್ಗೆ ನಿಮಗೆ ನಿಜವಾದ ಚಿತ್ರವನ್ನು ನೀಡಲಾರೆ. ಆದ್ದರಿಂದ ನಾನು ಸಾಕಷ್ಟು ದೀರ್ಘವಾದ ಪೀಠಿಕೆಯನ್ನು ಹಾಕಬೇಕಾಗುವುದು. ನೀವು ಬೇಸರ ಪಟ್ಟುಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ.

ನಾನು ಪ್ರೌಢಶಾಲೆಯಲ್ಲಿದ್ದಾಗಲೇ ನನಗೆ ಸ್ವಾಮಿ ವಿವೇಕಾನಂದರ ವಿಷಯ ತಿಳಿಯಿತು ಮತ್ತು ಅವರ ಮೇಲೆ ಅಸಾಧಾರಣ ಆಕರ್ಷಣೆ ಉಂಟಾಯಿತು. ನಾನು ಓದಿದ ಮೊದಲ ಪುಸ್ತಕ, *A Study of Religion* ಎಂಬ ಅವರ ಉಪನ್ಯಾಸಗಳ ಸಂಕಲನ. ಅದರಿಂದ ನಾನು ಸ್ಫೂರ್ತಿಗೊಂಡೆ; ಒಂದು ಇಡೀ ಹೊಸ ಪ್ರಪಂಚವೇ ನನಗೆ ತೆರೆದಂತಾಯಿತು. ಅದೇ ಸಮಯದಲ್ಲಿ ಶ್ರೀರಾಮಕೃಷ್ಣರ ವಿಷಯವೂ ನನಗೆ ತಿಳಿಯಿತು ಮತ್ತು ನಮ್ಮ ಪ್ರೌಢಶಾಲೆಯ ಉಪಾಧ್ಯಾಯರೊಬ್ಬರು ಬೇಲೂರು ಮಠವನ್ನು ನೋಡಲು ನನ್ನನ್ನು ಕರೆದೊಯ್ದರು. ಮಠದಿಂದ ಹಿಂತಿರುಗಿದ ಮೇಲೆ ಎಂದಿಗಿಂತ ಹೆಚ್ಚಾಗಿ ನಾನು ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರಲ್ಲಿ ಅನುರಕ್ತನಾದೆ. ನಾನು ವ್ಯಾಸಂಗ ಮಾಡುತ್ತಿದ್ದಾಗ ವಾಸಿಸುತ್ತಿದ್ದ ಮನೆಯಲ್ಲಿ ಅವರೀರ್ವರಿಗೂ ಒಂದು ಪೂಜಾಗೃಹವನ್ನು ಮಾಡಿ ಅಲ್ಲಿ ಬೆಳಗಿನ ಪೂಜೆಯನ್ನು ಮಾಡುತ್ತಿದ್ದೆ. ನಸುಕಿಗೆ ಮುನ್ನವೇ ಎದ್ದು ಪಕ್ಕದಲ್ಲಿದ್ದ ತೋಟಕ್ಕೆ ಹೋಗಿ ಕತ್ತಲಿನಲ್ಲಿಯೇ ಸುಗಂಧ ಪುಷ್ಪಗಳನ್ನು ಪೂಜೆಗೆ ತರುತ್ತಿದ್ದೆ. ಅನಂತರ ಸ್ನಾನ ಮಾಡಿ ಪೂಜೆ ಮತ್ತು ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದೆ. ಆ ಪೂಜೆ ಹಲವು ಗಂಟೆಗಳ ಕಾಲ ತೆಗೆದುಕೊಳ್ಳುತ್ತಿತ್ತು. ನಂತರ ಸ್ವಲ್ಪ ಉಪಾಹಾರವನ್ನು ಸೇವಿಸಿ ಶಾಲೆಗೆ ಹೋಗುತ್ತಿದ್ದೆ. ಆಗ ಸುಮಾರು ೧೧ ಘಂಟೆ ಆಗಿರುತ್ತಿತ್ತು. ಅಂದಿನ ದಿನಗಳಲ್ಲಿ ಬಂಗಾಳ ದೇಶದಲ್ಲಿ ಈ ದೇಶದಂತೆ (ಅಮೆರಿಕ) ಅಷ್ಟು ಬೇಗನೆ ಶಾಲೆ ಪ್ರಾರಂಭವಾಗುತ್ತಿರಲಿಲ್ಲ. ಹಗಲಿನಲ್ಲಿ ಅಥವಾ ಸಂಜೆಯ ಬಿಡುವಿನ ಸಮಯದಲ್ಲಿ ಮೂಲ ಬಂಗಾಳಿಯ "ಕಥಾಮೃತ" ಮತ್ತು ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಓದುತ್ತಿದ್ದೆ. ಇದರಿಂದಾಗಿ ನನ್ನ ಚೈತನ್ಯ ಕ್ರಮೇಣ ಜಾಗೃತವಾಗತೊಡಗಿತು.

ಒಂದು ದಿನ ಒಂದು ವಿಚಿತ್ರ ಘಟನೆ ನಡೆಯಿತು. ಮಧ್ಯಾಹ್ನದ ಹೊತ್ತಿನಲ್ಲಿ ನನ್ನ ಪದ್ಧತಿಯಂತೆ ಕಾಳೀ ಮಾತೆಯನ್ನು ಕುರಿತು ಧ್ಯಾನಿಸುತ್ತಿದ್ದೆ. ಆಗ ಇದ್ದಕ್ಕಿದ್ದಂತೆ ತಾಯಿ ಕಾಳಿಯ ಸ್ಥಾನದಲ್ಲಿ ಸ್ವಾಮಿ ವಿವೇಕಾನಂದರ ಸ್ಪಷ್ಟ ಸಾನ್ನಿಧ್ಯದ ಅನುಭವವಾಯಿತು. ಬದಲಾವಣೆಯು ಇದ್ದಕ್ಕಿದ್ದಂತೆ ಮತ್ತು ಬಹಳ ಸ್ಪಷ್ಟವಾಗಿ ಆಗಿತ್ತು. ಅದಾದ ಕೂಡಲೇ ಸ್ವಾಮಿಜಿ ತಮ್ಮ ಶಕ್ತಿ ಮತ್ತು ಚೈತನ್ಯವನ್ನು ನನ್ನೊಳಗೆ ಹರಿಸುತ್ತಿರುವ ಅನುಭವವಾಯಿತು. ಅದು ಖಚಿತವಾದ ಮತ್ತು ನಿಸ್ಸಂದೇಹವಾದ ಅನುಭವ. ಒಂದು ತುಂಬಿರುವ ಬಿಂದಿಗೆಯ ಬಾಯನ್ನು ಖಾಲಿ ಬಿಂದಿಗೆಯ ಬಾಯಿಯ ಮೇಲೆ ಬೋರಲು ಹಾಕಿದಾಗ ಅದರಲ್ಲಿರುವುದೆಲ್ಲಾ ಅಡೆತಡೆಯಿಲ್ಲದೆ ಕೆಳಗಡೆಯದಕ್ಕೆ ಬೀಳುವಂತೆ ಅವರ ಶಕ್ತಿ ನನಗೆ ಹರಿದು ಬಂದಿತು. ಇನ್ನೇನು ಮೈಮರೆತು ಬೀಳುವಂತಾಗಿ

ಚೇತರಿಸಿಕೊಂಡೆ. ಶಕ್ತಿಸಂಚಾರದ ಈ ಘಟನೆಯು ಸಂಪೂರ್ಣವೂ ಆಗಿತ್ತು. ಈ ಅನುಭವ ಇದ್ದಕ್ಕಿದ್ದಂತೆ ವಿಚಿತ್ರವಾಗಿ, ಅನಿರೀಕ್ಷಿತವಾಗಿ ಆಗಿತ್ತು. ನಾನು ಸ್ವಾಮಿಜಿಯ ಮೇಲೆ ಧ್ಯಾನಿಸುತ್ತಲೂ ಇರಲಿಲ್ಲ! ಸ್ವಲ್ಪ ಸಮಯದ ನಂತರ ಕನ್ನಡಿಯಲ್ಲಿ ನನ್ನನ್ನು ನೋಡಿಕೊಂಡಾಗ ನನ್ನ ಕಣ್ಣಿನ ಬಿಳಿಯ ಭಾಗವು ತುಂಬ ಕೆಂಪಾಗಿದ್ದುವು. ಅದೇಕೆಂದು ನನಗೆ ಅರ್ಥವಾಗಲಿಲ್ಲ.

ಇದಾದ ಸ್ವಲ್ಪ ಕಾಲದ ನಂತರ ಸ್ವಾಮಿಜಿ ನಮ್ಮ ಮನೆಗೇ ಬಂದಂತೆ ಕನಸಾಯಿತು. ಆಗ ನನ್ನ ಗುರುಗಳು ಬಂದರೆಂದು ಭಾವಿಸುತ್ತ, ಸಂತಸದಿಂದ ನನ್ನ ತಾಯಿಗೆ ಹೇಳಬೇಕೆನ್ನಿಸಿತು. ನಮ್ಮ ಮನೆಯ ಕೆಲವರು ಮತ್ತು ಒಬ್ಬ ಸ್ನೇಹಿತ ಸ್ವಾಮಿಜಿಯನ್ನು ನೋಡಲು ಬಂದು ಅವರ ಸುತ್ತ ನಿಂತುಕೊಂಡರು. ಸ್ವಾಮಿಜಿ ಕುರ್ಚಿಯಲ್ಲಿ ಕುಳಿತರು ಹಾಗೂ ನಾನು ಅವರ ಪಾದಗಳ ಬಳಿ ಕುಳಿತೆ. ಅವರು ನನ್ನನ್ನು ಬಹಳ ಪ್ರೀತಿಯಿಂದ ನೋಡುತ್ತಿದ್ದರು. ಅವರು ಇತರರೊಡನೆ ಮಾತನಾಡಲೇ ಇಲ್ಲ. ಅವರತ್ತ ನೋಡಲೂ ಇಲ್ಲ. ನನ್ನೊಡನೆ ಬಹಳಷ್ಟು ಮಾತನಾಡುತ್ತಲೇ ಇದ್ದರು. "ಸ್ವಾಮಿಜಿ, ದಯವಿಟ್ಟು ಇತರರೊಡನೆಯೂ ಮಾತನಾಡಿ" ಎಂದು ನಾನು ಆಗ ಸಂಕೋಚದಿಂದ ಕೇಳಿಕೊಳ್ಳಬೇಕಾಯಿತು. ಅವರು ತಮ್ಮ ಕೃಪಾಪೂರ್ಣ ದೃಷ್ಟಿಯಿಂದ ನನ್ನ ಮೇಲೆ ವಿಶ್ವಾಸದ ಮಳೆಗರೆದರು ಮತ್ತು ಆ ಕನಸಿನ ಮೂಲಕ ಅವರು ನನ್ನ ಗುರುಗಳೆಂಬುದು ನನ್ನ ಅರಿವಿಗೆ ಬಂದಿತು.

ಈ ಕನಸು ಬಹಳ ಸ್ಪಷ್ಟವಾಗಿತ್ತು ಮತ್ತು ಅದು ನನ್ನನ್ನು ಸ್ವಲ್ಪ ಯೋಚಿಸುವಂತೆ ಮಾಡಿತು. "ಅದರಲ್ಲಿ ಎಷ್ಟು ಸತ್ಯವಿದೆ? ಧ್ಯಾನದ ಸಮಯದಲ್ಲಿ ನನಗೆ ಆದ ಅನುಭವದ ಅರ್ಥ, ನಾನು ಸ್ವಾಮಿಜಿಯವರಿಂದ ದೀಕ್ಷೆ ಪಡೆದಿರುವೆನೆಂದೇನು? ಇದನ್ನು ನಿಜವೆಂದು ನಂಬುವುದು ಹೇಗೆ?"

ಅಂದಿನ ದಿನಗಳಲ್ಲಿ ನಾನು ಆಗೊಮ್ಮೆ ಈಗೊಮ್ಮೆ ಬೇಲೂರು ಮಠಕ್ಕೆ ಹೋಗುತ್ತಿದ್ದೆ ಮತ್ತು ಸ್ವಾಮಿ ಪ್ರೇಮಾನಂದರನ್ನು ಬಹಳ ನಿಕಟವಾಗಿ ಬಲ್ಲವನಾಗಿದ್ದೆನಾದರೂ ಅವರೊಂದಿಗೆ ಬಹಳ ಸಂಕೋಚದಿಂದ ನಡೆದುಕೊಳ್ಳುತ್ತಿದ್ದೆ. ನನ್ನ ಅನುಭವದ ಬಗ್ಗೆ ಅವರಿಗೆ ಹೇಳಿದೆನಾದರೂ ಸಂಪೂರ್ಣ ವಿವರಗಳನ್ನು ಹೇಳಲಿಲ್ಲ ಹಾಗೂ ಅದು ನಿಜವೇ ಎಂದು ಅವರಲ್ಲಿ ವಿಚಾರಿಸಲು ಪ್ರಯತ್ನಿಸುತ್ತಿರುವೆನು ಎಂಬುದನ್ನು ಅವರಿಗೆ ವಿಶದಪಡಿಸಲಿಲ್ಲ. ಆದ್ದರಿಂದ ಸಹಜವಾಗಿ ಅವರಿಂದ ಸ್ಪಷ್ಟವಾದ ಉತ್ತರ ನನಗೆ ದೊರೆಯಲಿಲ್ಲ. ಅವರಿಗೊಂದು ಪತ್ರ ಬರೆಯುವುದು ಉತ್ತಮ ಎಂದು ಯೋಚಿಸಿದೆ. ನೋಡಿ, ಸಂಕೋಚವಾದಾಗ ಮನಸ್ಸಿನಲ್ಲಿರುವುದನ್ನು ವ್ಯಕ್ತಪಡಿಸುವುದಕ್ಕೆ ಮತ್ತು ನೇರವಾಗಿ ಪ್ರಶ್ನೆ ಕೇಳುವುದಕ್ಕೆ ಅತ್ಯಂತ ಒಳ್ಳೆಯ ಮಾರ್ಗವೆಂದರೆ ಪತ್ರವನ್ನು ಬರೆಯುವುದು. ಆದ್ದರಿಂದ ನಾನು ಘಟನೆಯನ್ನು ಸಂಪೂರ್ಣವಾಗಿ ವಿವರಿಸಿ ಬರೆದು, "ಅದು ನಿಜವಾಗಿಯೂ ದೀಕ್ಷೆಯೇ? ಅದನ್ನು ನಿಜವೆಂದು ಸ್ವೀಕರಿಸಬಹುದೇ?" ಎಂದು ಕೇಳಿದೆ. ಅವರು ತಡವಿಲ್ಲದೆ ದೀರ್ಘ ಪತ್ರವನ್ನು ಬರೆದು, "ನೀನು ಸ್ವಾಮಿಜಿಯ ಕೆಲಸವನ್ನು ಮಾಡಲು ಜನ್ಮ ತಾಳಿರುವೆ. ಅವರಿಂದ ದೀಕ್ಷೆಯನ್ನು ಪಡೆದ ನೀನು ನಿಜವಾಗಿಯೂ ಧನ್ಯ" ಎಂದು ತಿಳಿಸಿದರು.

ಆ ಸಮಯದಲ್ಲಿ ನಾನು ಕಲ್ಕತ್ತೆಯಲ್ಲಿ ಕಾಲೇಜಿಗೆ ಹೋಗುತ್ತಿದ್ದೆ. ನನ್ನ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಮುಗಿದ ನಂತರವೇ ಮಠಕ್ಕೆ ಸೇರಲು ಅನುಮತಿ ನೀಡುವುದಾಗಿ ಸ್ವಾಮಿ ಪ್ರೇಮಾನಂದರು ನನಗೆ ಆಶ್ವಾಸನೆ ನೀಡಿದ್ದರು. ಅವರು ಒಮ್ಮೆ ನನಗೆ ಬರೆದಿದ್ದರು: "ಮುಂದೆ ಇತರ ದೇಶಗಳಿಂದ ಖಂಡಿತವಾಗಿಯೂ ಬಹಳ ಜನರು ಮಠಕ್ಕೆ ಬರುವರು. ನೀನು ಚೆನ್ನಾಗಿ ವಿದ್ಯಾಭ್ಯಾಸ ಪಡೆದುಕೊಳ್ಳದೆ, ಅವರೊಂದಿಗೆ ಹೇಗೆ ಮಾತನಾಡುವೆ? ಶ್ರೀರಾಮಕೃಷ್ಣರ ಮತ್ತು ಸ್ವಾಮಿಜಿಯ ಆಲೋಚನೆಗಳು ಎಷ್ಟು ಆಳವಾದವು ಎಂದರೆ ನೀನು ಪ್ರಾಜ್ಞನಲ್ಲದಿದ್ದರೆ ಅವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿನ್ನ ವಿದ್ಯಾಭ್ಯಾಸವನ್ನು ಮುಗಿಸು." ಒಮ್ಮೆ ನಾನು ಅವರನ್ನು ನೋಡಲು ಮಧ್ಯಾಹ್ನದ ಮೇಲೆ ಬೇಲೂರು ಮಠಕ್ಕೆ ಹೋಗಿದ್ದಾಗ ಹೇಳಿದರು, "ಸ್ವಾಮಿಜಿಗೆ ಕೆಲವು ವಿಷಯಗಳು ಬಹಳ ಇಷ್ಟ. ಒಂದು ತತ್ತ್ವಶಾಸ್ತ್ರ, ಮತ್ತೊಂದು ಇತಿಹಾಸ, ಮತ್ತು ಮೂರನೆಯದು ಸಂಸ್ಕೃತ." ನಾನೂ ಕೂಡ ಆ ವಿಷಯಗಳನ್ನು ಅಧ್ಯಯನ ಮಾಡಬೇಕೆಂದು ಅವರು ಅತ್ಯಂತ ಕಾತರರಾಗಿದ್ದರು. ಅವರ ಆ ಮಾತನ್ನು ನಾನು ಸಂಪೂರ್ಣವಾಗಿ ಪಾಲಿಸಲಾಗದಿದ್ದರೂ ಕಾಲಕ್ರಮದಲ್ಲಿ ಕೊಲ್ಕತಾ ವಿಶ್ವವಿದ್ಯಾನಿಲಯದಿಂದ ಪದವೀಧರನಾದೆ. ಅದು ನಡೆದದ್ದು ೧೯೧೭ರಲ್ಲಿ.


ಆ ಸಮಯದಲ್ಲಿ ನನ್ನ ಆರೋಗ್ಯ ಸ್ವಲ್ಪವೂ ಚೆನ್ನಾಗಿರಲಿಲ್ಲವಾದ್ದರಿಂದ ಕೂಡಲೇ ಆಶ್ರಮಕ್ಕೆ ಸೇರಬಾರದು ಎಂದುಕೊಂಡೆ. ಸ್ವಾಮಿ ಪ್ರೇಮಾನಂದರು ಆ ಸಮಯದಲ್ಲಿ ಪೂರ್ವ ಬಂಗಾಳಕ್ಕೆ ಹೋಗಿದ್ದರು. ಆದ್ದರಿಂದ ನಾನು ಏನು ಮಾಡಿದರೆ ಉತ್ತಮವೆಂದು ತಿಳಿಸಿರೆಂದು ಅವರಿಗೇ ಬರೆದೆ. ಅವರು ಉತ್ತರವಿತ್ತರು: "ನಾನೀಗ ಬಹಳಷ್ಟು ಪ್ರಯಾಣ ಮಾಡುತ್ತಿರುವೆನು ಮತ್ತು ಇನ್ನೂ ಸ್ವಲ್ಪ ಕಾಲ ಬೇಲೂರಿಗೆ ಬರುವುದಿಲ್ಲ. ಆದುದರಿಂದ ನೀನು ಮಠಕ್ಕೆ ಹೋಗಿ ಸ್ವಾಮಿ

ತುರೀಯಾನಂದರೊಡನೆ ಮಾತನಾಡುವುದು ಒಳ್ಳೆಯದು. ಅವರು ಅಮೃತ ಸಾಧುಗಳಷ್ಟೇ ಅಲ್ಲ, ಉತ್ತಮ ಆಧ್ಯಾತ್ಮಿಕ ವ್ಯಕ್ತಿ, ಹಾಗೂ ತುಂಬ ತಿಳಿದವರು. ಅವರೊಡನೆ ಮಾತನಾಡಿ ಅವರು ಹೇಳಿದಂತೆ ಮಾಡು." ಅವರು ಆ ರೀತಿಯಾಗಿ ಬರೆದಿದ್ದರೂ, ಹಾಗೆ ಮಾಡಲು ನನಗೆ ಅಷ್ಟೇನೂ ಇಷ್ಟವಿರಲಿಲ್ಲ. ಮಠವನ್ನು ಸೇರುವ ಬಗ್ಗೆ ಸ್ವಾಮಿ ಪ್ರೇಮಾನಂದರೊಡನೆ ಮಾತ್ರ ಮಾತನಾಡಬೇಕೆಂದಿದ್ದೆ. ಅವರು ನಾನು ಸ್ವಾಮಿ ತುರೀಯಾನಂದರೊಡನೆ ಮಾತನಾಡಬೇಕೆಂದು ಹೇಳಿದ್ದರಿಂದ ಕೊನೆಯ ಪಕ್ಷ ಬೇಲೂರು ಮಠಕ್ಕೆ ಹೋಗಿ ಅವರನ್ನು ಒಮ್ಮೆಯಾದರೂ ನೋಡಬೇಕೆಂದುಕೊಂಡೆ—ಮಾತನಾಡುವುದಲ್ಲ, ಆದರೆ ಕನಿಷ್ಠ ಪಕ್ಷ ನೋಡುವುದು.

ಒಂದು ಮಧ್ಯಾಹ್ನ ನಾನು ಕೊಲ್ಕತಾದಿಂದ ಬೇಲೂರು ಮಠಕ್ಕೆ ಹೋದೆ. ಸ್ವಾಮಿ ತುರೀಯಾನಂದರು, ಸ್ವಾಮಿ ಶಿವಾನಂದರು ಮತ್ತು ಸ್ವಾಮಿ ಬ್ರಹ್ಮಾನಂದರು ಒಂದೇ ಕೊಠಡಿಯಲ್ಲಿ ಕುಳಿತಿದ್ದುದನ್ನು ಕಂಡೆ. ಅವರೆಲ್ಲರೂ ಯಾವುದೋ ವಿಷಯವನ್ನು ಮಾತನಾಡುತ್ತ ಬಹಳವಾಗಿ ನಗುತ್ತಿದ್ದರು. ಅವರೆಲ್ಲ ಬಹಳ ಸಂತೋಷದಿಂದ ಇದ್ದರು. ಸ್ವಾಮಿ ತುರೀಯಾನಂದರ ಸುತ್ತ ಒಂದು ಬಂಗಾರದ ಕಾಂತಿಯುಳ್ಳ ಪ್ರಭೆ ಇದ್ದುದನ್ನು ಗಮನಿಸಿದೆ. ನನ್ನ ಕಣ್ಣುಗಳಲ್ಲಿ ಏನೋ ದೋಷವಿರಬೇಕೆಂದು ಯೋಚಿಸಿದೆ, ಆದರೆ ಉಳಿದುದೆಲ್ಲವೂ ಸಂಪೂರ್ಣವಾಗಿ ಸಾಧಾರಣ ರೀತಿಯಲ್ಲೆ ಕಾಣಿಸುತ್ತಿದ್ದುವು. ನನ್ನ ಕಣ್ಣುಗಳು ಸರಿಯಾಗಿಯೇ ಇದ್ದವು. ಆದರೂ, ನಾನು ಪ್ರತಿ ಬಾರಿ ಸ್ವಾಮಿ ತುರೀಯಾನಂದರ ಕಡೆ ನೋಡಿದಾಗಲೂ ಅವರ ತಲೆಯ ಸುತ್ತ ಆ ಕಾಂತಿ ಕಾಣುತ್ತಿತ್ತು. ಇನ್ನಿಬ್ಬರು ಸ್ವಾಮಿಗಳಿಗೆ ಆ ರೀತಿ ಇರಲಿಲ್ಲ; ಇವರಿಗೆ ಮಾತ್ರವೇ ಇತ್ತು. ಹೀಗೆ ಕಂಡರೂ ನಾನು ಅವರನ್ನು ಮುಂದೇನು ಮಾಡಲಿ ಎಂದು ಕೇಳಲಿಲ್ಲ; ನಂತರ ಸ್ವಾಮಿ ಪ್ರೇಮಾನಂದರೊಡನೆ ಮಾತನಾಡೋಣವೆಂದು ಯೋಚಿಸುತ್ತ ಮನೆಗೆ ಹೋದೆ.

ಸ್ವಾಮಿ ಪ್ರೇಮಾನಂದರು ಪೂರ್ವ ಬಂಗಾಳದಲ್ಲಿ ಭಯಂಕರ ಜ್ವರದಿಂದ ಪೀಡಿತರಾದರು. ಸ್ವಲ್ಪ ಕಾಲದ ನಂತರ, ಅದರಿಂದ ಸಂಪೂರ್ಣವಾಗಿ ಗುಣವಾಗುವುದರೊಳಗೆ ಮೊದಲೇ ಅದರೊಂದಿಗೆ ಫ್ಲೂ ಜ್ವರ ಕೂಡ ಸೇರಿತು. ೧೯೧೮ರಲ್ಲಿ ಪ್ರಪಂಚಾದ್ಯಂತ ಫ್ಲೂ ಪಿಡುಗು ಹರಡಿತ್ತು. ಅವರನ್ನು ಕೊಲ್ಕತಾಗೆ ಚಿಕಿತ್ಸೆಗಾಗಿ ಕರೆತಂದರೂ ಕೆಲವೇ ದಿನಗಳಲ್ಲಿ ಅವರು ಕಾಲವಾದರು. ನಾನು ಅವರೊಂದಿಗೆ ಮತ್ತೆ ಮಾತನಾಡಲು ಸಾಧ್ಯವಾಗಲೇ ಇಲ್ಲ ಹಾಗೂ ನಾನು ಮಠವನ್ನು ಸೇರುವುದೊ ಬೇಡವೊ ಎಂಬ ಸಮಸ್ಯೆ ಬಗೆಹರಿಯದೆ ಉಳಿಯಿತು.

ಕೊನೆಗೆ ನಾನು ಎಲ್ಲವನ್ನೂ ವಿವರಿಸಿ, ಸಂಬಂಧಪಟ್ಟ



ಕಲ್ಕತ್ತೆಯಲ್ಲಿ, ಎಡದಿಂದ ಸ್ವಾಮಿ ತ್ರಿಗುಣಾತೀತಾನಂದಜಿ, ಸ್ವಾಮಿ ಶಿವಾನಂದಜಿ, ಸ್ವಾಮಿ ವಿವೇಕಾನಂದಜಿ, ಸ್ವಾಮಿ ತುರೀಯಾನಂದಜಿ ಮತ್ತು ಸ್ವಾಮಿ ಬ್ರಹ್ಮಾನಂದಜಿ. ಕೆಳಗೆ: ಸ್ವಾಮಿ ಸದಾನಂದಜಿ

ಅನೇಕ ಪ್ರಶ್ನೆಗಳೊಂದಿಗೆ ಸ್ವಾಮಿ ತುರೀಯಾನಂದರಿಗೆ ಪತ್ರವನ್ನು ಬರೆದೆ. ಅವರು ನನಗೆ ಒಂದು ದೀರ್ಘವಾದ ಉತ್ತರವನ್ನು ಬರೆದರು. ಅದರಲ್ಲಿ ನನ್ನ ಎಲ್ಲಾ ಪ್ರಶ್ನೆಗಳಿಗೂ ವಿವರವಾದ ಉತ್ತರವಿತ್ತರು ಮತ್ತು ಸ್ಪಷ್ಟವಾಗಿ ಅನೇಕ ವಿಷಯಗಳನ್ನು ವಿವರಿಸಿದರು. ಸ್ವಾಮಿಜಿಯಿಂದ ನನಗೆ ದೊರೆತ ದೀಕ್ಷೆ ನಿಜವಾದುದೆಂದೂ ಮತ್ತು ಉಪದೇಶಗಳಲ್ಲಿ ಮೂರು ವಿಧಗಳಿವೆ ಎಂದೂ ಅವರು ತಿಳಿಸಿದರು. ನೇರವಾಗಿ ಶಿವನಿಂದ ಬರುವುದು ಒಂದು ಬಗೆಯದು—ಅದನ್ನು ಶಾಂಭವ ಎನ್ನುತ್ತಾರೆ (ಶಾಂಭವೀದೀಕ್ಷೆ ಎಂದು ತಂತ್ರ ಶಾಸ್ತ್ರದಲ್ಲಿದೆ). ಮತ್ತೊಂದರ ಹೆಸರು ಶಕ್ತಿ (ಶಕ್ತಿಪಾತ ಎಂದು ತಂತ್ರಶಾಸ್ತ್ರದಲ್ಲಿ). ಅದು ಜ್ಞಾನದಿಂದ ಕೂಡಿದ್ದು ಶಿಷ್ಯನ ದೇಹವನ್ನು ಪ್ರವೇಶಿಸುವುದು. ಮೂರನೆಯದು ಸಾಮಾನ್ಯ ರೀತಿಯದು (ಶ್ರುತಿದೀಕ್ಷೆ ಎಂದು ತಂತ್ರಶಾಸ್ತ್ರದಲ್ಲಿ). ಅದರಲ್ಲಿ ಗುರು ಒಂದು ಮಂತ್ರ ಮತ್ತು ಇತರ ಉಪದೇಶಗಳನ್ನು ನೀಡುವರು. ನಾನು ಎರಡನೆ ಬಗೆಯ ದೀಕ್ಷೆಯನ್ನು ಪಡೆದಿರುವುದಾಗಿ ಅವರು ತಿಳಿಸಿದರು. ಅದರಲ್ಲಿ ಯಾವುದೇ ಮಂತ್ರ ಅಥವಾ ಉಪದೇಶವನ್ನು ನಾನು ಪಡೆದಿರಲಿಲ್ಲ. "ನೀನು ಏನನ್ನೂ ಮಾಡಬೇಕಾಗಿಲ್ಲ. ನೀನು ಏನನ್ನು ಪಡೆದಿರುವೆಯೊ ಅದು ಸಾಕು; ಅದು ಕೆಲಸ ಮಾಡುತ್ತಾ ಇರುವುದು. ಯಾವುದು ಆವಶ್ಯಕವೊ ಅದನ್ನು ನೀನು ಮಾಡುವಂತೆ ಸ್ವಯಂ ಸ್ವಾಮಿಜಿಯೇ ಪ್ರೇರೇಪಿಸುವರು" ಎಂದು ಅವರು ಬರೆದರು. ನನಗೆ ಬಹಳ ಸಂತೋಷವಾಯಿತು. ನಾನು ಆಲೋಚಿಸಿದೆ, "ಬಹಳ ಒಳ್ಳೆಯದು; ಅದರ ಬಗ್ಗೆ ನಾನಿನ್ನು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ; ಎಲ್ಲರೂ ಯಾವುದನ್ನು ಅರಸುವರೊ ಅದು ನನಗಾಗಲೇ ದೊರೆತಿದೆ!" ಆದರೆ ನೋಡಿ, ಮನಸ್ಸಿನ ಸ್ವಭಾವವೇ ಅಂತಹುದು—ಅದು ತನ್ನ ಸಂದೇಹಗಳನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ.

**(ಮುಂದುವರಿಯುವುದು)**